ಸುಮ್ಮನೆ ಹಾಗೇ ನಿಂತಿದೆ. ಬೇರೆ ಲಾರಿ ತೆಗೆದುಕೊಂಡರೆ ಕಮಿಷನ್ ಸಿಗುತ್ತದೆ, ಸ್ವಂತ ಲಾರಿ ತೆಗೆದು ಕೊಂಡರೆ ಕಮಿಷನ್ ಸಿಗುವುದಿಲ್ಲ, ಆದ್ದರಿಂದ ಅವರು ಹಾಗೆ ಮಾಡುತ್ತಿದ್ದಾರೆ. ಜೊತೆಗೆ ಸಕ್ಕರೆ ಯನ್ನು ಕಾಳಸಂತೆಯಲ್ಲಿ ಪ್ರತಿನಿತ್ಯ ಮಾರುತ್ತಿದ್ದಾರೆ. ಇಷ್ಟೆಲ್ಲಾ ನಡೆಯುತ್ತಿದ್ದರೂ ಕ್ರಮ ತೆಗೆದು ಕೊಳ್ಳದೇ ಇರುವುದಕ್ಕೆ ಕಾರಣ ಏನು ಸ್ವಾಮಿ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.— ಮಾನ್ಯ ಸದಸ್ಯರು ಹೇಳಿದಮೇಲೇ ನನಗೆ ಈ ವಿಚಾರ ಗೊತ್ತಾಗಿದ್ದು. ಈಗಲೂ ಕೂಡ ಮಾನ್ಯ ಸದಸ್ಯರು ಅಪಾದನೆಗಳನ್ನು ಪಟ್ಟಿಮಾಡಿ ಕೊಡಲಿ. ನಾನು ತನಿಖೆ ಮಾಡಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬೆಟ್ಟಸ್ವಾಮಿ ಗೌಡ.—ಆಮೇಲೆ ಇನ್ನೊಂದು ವಿಷಯ...

MR. DEPUTY SPEAKER.—I am not allowing you. Give him the details he will take action. As a matter of right, under the Calling Attention only one clarification is allowed. Please give the details and the Hon.Minister has promised to look into the matter.

(*ii*) *re:– Brain fever in Mandya and Maddur Taluks.*

Sri M. S. ATMANANDA.— Sir, I call the attention of the Minister for Health and Family Welfare to the attack of Brain fever in Mandya and Maddur Taluks and the hardship caused to the people living in that area.

Sri A. K. ABDUL SAMAD.— (Minister for Health and Family Welfare).—

Sir,

The brain fever is noticed in Mandya and Maddur taluks of Mandya district since April, 1981. 15 deaths have occured out of 48 people reported to have been affected by this disease in 42 villages as on date. Suitable treatment has been given to the affected persons in the Primary Health Centres and the District Hospital. A separate ward has been reserved in the District Hospital, Mandya for persons suffering from this disease. An expert in children's diseases is rendering treatment.

Arrangements have been made to spray insecticide in all the houses in the villages affected by this disease. Instructions have been given to keep the pigs away from the affected villages. Investigations are on in Mandya by a team of Experts.

All precautions have been taken to arrest the spread of this disease.

ಶ್ರೀ ಎಂ. ಎಸ್. ಆತ್ಮಾನಂದ.— ಮಾನ್ಯ ಅಧ್ಯಕ್ಷರೇ, ಮುರುವಾದ ಈ ಖಾಯಿಲೆ ಳಿದ ಹಳ್ಳಿಗಳ ಲ್ಲಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ನಾನು ಸಚಿವರನ್ನು ಕೇಳುತ್ತಿದ್ದೇನೆ. ಈ ಖಾಯಿಲೆ ಳಿದ ಹಳ್ಳಿಗಳಿಗೆ ಮಾತ್ರ ಸೀಮಿತವಾಗಿದೆಯೋ ಅಥವಾ ಬೇರೆ ಹಳ್ಳಿಗಳಿಗೂ ಹರಡಿದೆಯೋ ? ಈ ಮಿದುಳು ಖಾಯಿಲೆಗೆ ಪಂದಿ ಕಾರಣ ಎಂದು ಹೇಳಿ ಪಂದಿಗಳನ್ನು ಊರಿನಿಂದ ಹೊರಗೆ ಕಳುಹಿಸಲು

ಸೂಚನೆ ನೀಡಲಾಗಿದೆ ಎಂದು ಹೇಳಿದ್ದಾರೆ, ಹಂದಿ ಸಾಕುವವರು ಫೈನಾನ್ಷಿಯಲ್ ಇನ್‌ಸ್ಟಿಟ್ಯೂಷನ್ ನಿಂದ ಸಾಲ ತೆಗೆದುಕೊಂಡಿರುವುದರಿಂದ ಅದನ್ನು ಊರಿನ ಭಾಗದಿಂದ ಬೇರೆಡೆಗೆ ಸ್ಥಳಾಂತರಿಸುವುದಕ್ಕೆ ಹಿಂಜರಿಯುತ್ತಾರೆ. ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ/ಮತ್ತು ಈ ಖಾಯಿಲೆ ಬಗ್ಗೆ ಸಾರ್ವಜನಿಕರಿಗೆ ಏನಾದರೂ ತಿಳಿವಳಿಕೆ ನೀಡಿದ್ದೀರಾ ?

SRI A. K. ABDUL SAMAD.— Sir 4 taluks have been covered — (1) Mandya Taluk, 17 villages, (2) Maddur Taluk, 23 villages, (3) Srirangapatna, 1 village and (4) Malavalli Taluk, 1 village. It has not spread to other places. We have taken steps to segregate and to avoid its occurrence in other places. We have also taken steps to have intense health education of the people in a villages and I am sure our Joint Director of Health has also met our Hon. Member when he visited the entire area to supervise whether effective steps have been taken or not even State level zonal committee to review this disease has also been formed and they are investigating.

FINANCIAL BUSINESS

Voting of Demands for Grants Demands Nos. 1,3,54 & 55

† ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ).— ಮಾನ್ಯ ಉಪಾಧ್ಯಕ್ಷರೇ, ವ್ಯವಸಾಯ ಮತ್ತು ಸಹಕಾರ ಇಲಾಖೆಗಳ ಬೇಡಿಕೆಯನ್ನು ನಾನು ಬೆಂಬಲಿಸುತ್ತಾ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಇಲ್ಲಿ ಬಹಳ ಮುಖ್ಯವಾಗಿರತಕ್ಕದ್ದು ವ್ಯವಸಾಯ ಇಲಾಖೆ. ನಾವೆಲ್ಲರೂ ಕೂಡ ರೈತಾಪಿ ಜನಗಳೇ. ರೈತರ ಮಕ್ಕಳೇ ಮತ್ತು ರೈತರಿಂದ ಆಯ್ಕೆಯಾಗಿ ಬಂದಿರತಕ್ಕ ಪ್ರತಿನಿಧಿಗಳೇ. ಆದರೆ, ನಾವು ಎಷ್ಟರ ಮಟ್ಟಿಗೆ ರೈತರ ಹಿತವನ್ನು ರಕ್ಷಿಸಿದ್ದೇವೆ ಎನ್ನುವುದು ಇನ್ನೂ ದೊಡ್ಡ ಪ್ರಶ್ನೆಯಾಗಿ ಉಳಿದಿದೆ. ಇಂದು ರೈತ ಖಂಡಿತವಾಗಿಯೂ ತೊಂದರೆಗೀಡಾಗಿದ್ದಾನೆ. ಇದಕ್ಕೆ ಕಾರಣವೇನೆಂಬುದನ್ನು ಕೂಲಂಕಷವಾಗಿ ವಿಚಾರ ಮಾಡಿದರೆ, ಪ್ರಕೃತಿ ವಿಕೋಪದಿಂದಾಗಿ ರೈತ ಕಂಗಾಲಾಗಿದ್ದಾನೆಂದು ಹೇಳಿದರೆ ತಪ್ಪಾಗಲಾರದು. ರೈತನ ತೊಂದರೆಗೆ ಶೇಕಡ ಎಪ್ಪತ್ತು ಭಾಗ ಪ್ರಕೃತಿ ವಿಕೋಪವೇ ಕಾರಣ. ಮತ್ತೆ ಕೆಲವು ಭಾಗ ರಾಜಕಾರಣಿಗಳಾಗಿರತಕ್ಕ ನಾವೂ ಕೂಡ ಕಾರಣವಾಗಿದ್ದೇವೆ. ರಾಜಕಾರಣಿಗಳೆಂದರೆ ನಾವೇನಲ್ಲ; ಕಳೆದ ಮೂವತ್ತು ವರ್ಷಗಳಿಂದಲೂ ಇದ್ದಂಥ ಎಲ್ಲ ರಾಜಕಾರಣಿಗಳು ಇದರಲ್ಲಿ ಪಾಲುದಾರರಾಗಿದ್ದಾರೆ. ವ್ಯವಸಾಯಗಾರನ ಉದ್ಧಾರಕ್ಕಾಗಿಯೇ ವ್ಯವಸಾಯ ಇಲಾಖೆ ನಮ್ಮಲ್ಲಿದೆ. ಈ ಇಲಾಖೆಯ ಬಹು ಮುಖ್ಯವಾದ ಕೆಲಸ ಎಂದರೆ ಅಧ್ಯಯನ ಮತ್ತು ಸಂಶೋಧನೆ. ಇದು ಒಂದು ಭಾಗ. ರೈತರಿಗೆ ಒಳ್ಳೆಯ ಉಪಕರಣಗಳನ್ನು ಒದಗಿಸುವ, ಬೀಜ ಮತ್ತು ಗೊಬ್ಬರಗಳನ್ನು ಸರಬರಾಜು ಮಾಡುವ ಹಾಗೂ ಉತ್ಪನ್ನ ಹೆಚ್ಚುವ ದಿಸೆಯಲ್ಲಿ ನಾನಾ ಯೋಜನೆಗಳನ್ನು ಹಾಕಿಕೊಂಡು ಈ ಇಲಾಖೆ ಕೆಲಸ ಮಾಡಬೇಕಾಗಿದೆ. ನಮ್ಮ ಭಾಗದಲ್ಲಿ ಈ ಇಲಾಖೆ ಮಾಡಬೇಕಾದ ಕೆಲಸವೆಂದರೆ ಬದು ಹಾಕಿಸುವುದು. ಇದರಿಂದ ಎಷ್ಟರ ಮಟ್ಟಿಗೆ ಪ್ರಯೋಜನವಾಗಿದೆ ಎಂಬುದನ್ನು ನಾವು ವಿಚಾರ ಮಾಡಬೇಕಾಗಿದೆ. ಶೇಕಡ ಎಂಬತ್ತರಷ್ಟು ಜನ ರೈತರಿರುವ ಈ ರಾಜ್ಯದಲ್ಲಿ ಅವರಿಗಾಗಿ ಇರುವ ಇಲಾಖೆಯಿಂದ ಖರ್ಚು ಮಾಡುವ ಹಣದಲ್ಲಿ ನೇರವಾಗಿ ಅವರಿಗೆಷ್ಟು ತಲುಪುತ್ತದೆ ಎನ್ನುವ ಬಗ್ಗೆ ನಾವು ಕೂಲಂಕಷವಾಗಿ ವಿಚಾರ ಮಾಡಬೇಕಾಗಿದೆಯಲ್ಲದೆ ಇದಕ್ಕೆ ಹೆಚ್ಚಿನ ಗಮನವನ್ನು ಸರ್ಕಾರ ಕೊಡಬೇಕೆಂದು ಸಲಹೆ ಮಾಡಬಯಸುತ್ತೇನೆ. ರೈತರಲ್ಲಿ ಒಗ್ಗಟ್ಟು ಮೂಡಿರುವುದನ್ನು ನಾವೀಗಾಗಲೇ ನೋಡಿದ್ದೇವೆ. ಶಾಂತಪ್ರಿಯರಾದ ರೈತರು ಯಾವತ್ತೂ ಕೂಡ ಸರ್ಕಾರದ ವಿರುದ್ಧ ಬೀದಿಗಿಳಿಯುವಂಥ ಕೆಲಸ ಮಾಡುತ್ತಿದ್ದವರಲ್ಲ. ಆದರೆ, ಇಂದು ಅಂಥ ಪರಿಸ್ಥಿತಿ ಬಂದಿರುವುದನ್ನು ನಾವು ಗಮನಿಸಬೇಕಾಗಿದೆ. ಇದು ನಮಗೆ ಬುದ್ಧಿ ಕಂಡ ಮೇಲೆ ಆಗಿರುವ ಬೆಳವಣಿಗೆ. ಇವಕ್ಕೆ ಕಾರಣ, ಒಂದು ಕಡೆ ಅತಿವೃಷ್ಟಿಯಾದರೆ ಇನ್ನೊಂದು ಕಡೆ ಅನಾ